ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಈಗಾಗಲೇ ಸ್ಲಮ್ ಬಾರದಹಾಗೆ ಕಾನೂನು ತರುತ್ತಿದ್ದೇವೆ ಸ್ಲಮ್ ಕ್ಲಿಯರೆನ್ಸ್‌ಬೋರ್ಡಿನವರೂ ಸಹಾ ಈ ಬಗ್ಗೆ ಒಂದು ಪ್ರಪೋಸಲ್‌ನ್ನು ತಯಾರು ಮಾಡಿ ಕೆಲವು ಕಳುಹಿಸಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದವರೂ ಸಹಾ ಸಾಕಷ್ಟು ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ ಮುಂದೆ ನಮ್ಮ ಸರ್ಕಾರದವರೂ ಸಹಾ ಇದಕ್ಕಾಗಿ ಹೆಚ್ಚಿಗೆ ಹಣವನ್ನು ವಿನಿಯೋಗಿಸಲಾಗಿಡಬೇಕು. ಸ್ಲಮ್. ಕ್ಲಿಯರೆನ್ಸ್ ಮಾಡುವುದಕ್ಕೆ ಒಂದು ಕಾರ್ಯಕ್ರಮವನ್ನು ಆದಷ್ಟು ಜಾಗ್ರತೆ ಹಾಕಿಕೊಳ್ಳುತ್ತೇವೆ.

Formation of Seed Corporation for the Preparation of layings by the Sericulturists in the State

594 SRI M.C. BASAPPA (Chamarajanagar).—Will the Minister for Sericulture and Horticulture be pleased to state.

(a) whether there was a proposal before Government to have a Seed Corporation for the preparation of layings for the Sericultuists in the State;

(b) if so, progress achieved in this direction so far?

SRI K.B. SHIVAIAH.—Minister for Sericulture and Horticulture

(a) Yes.

(b) Not yet finalised.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ರೇಷ್ಮೆ ಬಿತ್ತನೆ ತಯಾರಿಕೆಯಲ್ಲಿ ಖಾಸಗಿಯವರೂ ಇದ್ದಾರೆ. ಕರ್ನಾಟಕ ಸರ್ಕಾರದ ರೇಷ್ಮೆ ಇಲಾಖೆಯವರೂ ತಯಾರು ಮಾಡುತ್ತಾರೆ. ಜೊತೆಗೆ ಕೇಂದ್ರ ಸರ್ಕಾರದ ರೇಷ್ಮೆ ಮಂಡಲಿಯವರೂ ಕೂಡ ಈ ಕಸುಬನ್ನು ಮಾಡುತ್ತಿದ್ದಾರೆ. ಇದಕ್ಕೆ ಒಂದು ಸಂಸ್ಥೆ ಮಾಡಬೇಕೆನ್ನುವುದು ಇನ್ನೂ ಅಂತಿಮ ತೀರ್ಮಾನ ಆಗಿಲ್ಲ. ಇದು ಸರ್ಕಾರದ ಆಲೋಚನೆಯಲ್ಲಿದೆ ಎಂದು ಹೇಳಿದ್ದೀರಿ. ಈ ಮೂರು ಘಟಕಗಳನ್ನು ಒಂದು ಸಂಸ್ಥೆ, ಮಾಡುತ್ತೀರಾ ಅಥವಾ ಸರ್ಕಾರದವರೇ ನಡೆಸತಕ್ಕ ಒಂದು ಸಂಸ್ಥೆಯನ್ನು ಮಾಡುತ್ತೀರ?

ಶ್ರೀ ಕೆ. ಬಿ. ಶಿವಯ್ಯ.—ಇದಕ್ಕೆ ಒಂದು ಕಾರ್ಪೊರೇಷನ್ ಮಾಡಬೇಕು ಎನ್ನುವ ವಿಚಾರ ೧೯೭೪ ನೇ ಇಸವಿಯಲ್ಲಿ ನಡೆದಿದೆ. ಆದಾದಮೇಲೆ ಇವನ್ನು ಸ್ವಲ್ಪ ಪ್ರಗತಿಪರವಾಗಿ ಮಾಡಬೇಕು ಎನ್ನುವ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿತ್ತು. ಆದ್ದರಿಂದ ಅದನ್ನು ಇತ್ತೀಚೆಗೆ ಸಾಧ್ಯವಾದಷ್ಟು, ಆದರಲ್ಲೂ ಕೂಡ ಇದನ್ನು ಒಂದು ಲಾಭದ ಮನೋಭಾವದಿಂದ ನೋಡುವುದಕ್ಕಾಗುವುದಿಲ್ಲವೆಂದು, ಹೆಚ್ಚಿನ ರೀತಿಯಲ್ಲಿ ಆದಕ್ಕೆ ರೋಗಗಳು ಬಂದಾಗ ಅದನ್ನು ತಡೆಗಟ್ಟುವುದಕ್ಕಾಗುವುದಿಲ್ಲವೆಂದು ಇದರ ವ್ಯವಹಾರಗಳೆಲ್ಲವೂ ಕಮರ್ಶಿಯಲ್ ಬೇಸಿಸ್ ಮೇಲೆ ನಡೆಯುತ್ತವೆಂದು ಇದನ್ನು ಸರ್ಕಾರದ ಹತೋಟಿಯಲ್ಲಿ ಇಟ್ಟುಕೊಳ್ಳಬೇಕೆಂದು ತಮ್ಮ ತೀರ್ಮಾನವನ್ನು ಇದರ ಬಗ್ಗೆ ಜಪಾನಿನ ಮುಜಾರ್ ಮತ್ತು ಡಾಕ್ಟರ್ ಮಾನೋ ಅವರು ಒಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದ್ದರಿಂದ ಇದಕ್ಕೆ ಒಂದು ಕಾರ್ಪೊರೇಷನ್ ಮಾಡಿ ಅವರ ಒಂದು ಹತೋಟಿಯಲ್ಲಿ ಬಿಟ್ಟರೆ ಸರಿಯಾಗಿ ನಡೆಯುವುದಿಲ್ಲ ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ವಿಶ್ವಬ್ಯಾಂಕಿನಿಂದ ಎಕ್ಸ್‌ಪರ್ಟ್‌ಗಳು ಬಂದು ಒಂದೂ ಒಂದೂವರೆ ವರ್ಷ ಇದರ ಆಡಳಿತವನ್ನು ಸರ್ಕಾರದವರು ನಡೆಸಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಈಗ ಗ್ರೇನೇಜ್‌ಗಳನ್ನು ಸರ್ಕಾರದ ಹತೋಟಿಯಲ್ಲಿ ನಡೆಸಿದರೆ ಹೆಚ್ಚಿನ ರೀತಿಯಲ್ಲಿ ಸೇವೆಯನ್ನು ಮಾಡುವುದಕ್ಕೆ ಸಾಧ್ಯ ಎಂದು ಹೇಳಿದ್ದಾರೆ. ಆದ್ದರಿಂದ ಈಗಾಗಲೇ ಮಾಡಲ್ ಗ್ರೇನೇಜುಗಳನ್ನು ಮದ್ದೂರು, ಪಾಂಡವಪುರ, ಸಿಡಲಗಟ್ಟ ಹಾಗೂ ತಲಗಟ್ಟಪುರಿ ಈ ನಾಲ್ಕು ಕಡೆ ಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈ ನಾಲ್ಕು ಕಡೆಗಳಲ್ಲಿಯೂ ಸುಮಾರು ಒಂದು ಒಂದೂವರೆ ಕೋಟಿ ಮೊಟ್ಟೆಗಳನ್ನು ತಯಾರು ಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈಗ ೬ಳಿ ಸರ್ಕಾರದ ಗ್ರೇನೇಜುಗಳು ಇವೆ. ಅದರಲ್ಲಿ ೧೯೭೪–೭೫ನೇ ಸಾಲಿನಲ್ಲಿ ೧೫ ಕೋಟಿ ಮೊಟ್ಟೆಗಳನ್ನು ನಾವು ಹಂಚಿದ್ದೇವೆ. ೧೯೭೮–೭೯ರಲ್ಲಿ ೪ ಕೋಟಿ ಮೊಟ್ಟೆಗಳನ್ನು ಹಂಚಿದ್ದೇವೆ. ಈವರ್ಷ ಎಂದರೆ ೧೯೭೯–೮೦ರಲ್ಲಿ ೮ ಕೋಟಿ ಮೊಟ್ಟೆಗಳನ್ನು ಹಂಚಬೇಕೆಂದು ಸರ್ಕಾರ

ಉದ್ದೇಶವನ್ನು ಇಟ್ಟುಕೊಂಡಿದೆ. ಪೂರ್ಣವಾಗಿ ಸರ್ಕಾರದವರೇ ಮೊಟ್ಟೆಯನ್ನು ಮಾಡುವ ಹತೋಟಿಯನ್ನು ತೆಗೆದುಕೊಳ್ಳಬೇಕೆಂದು ಇನ್‌ಫ್ರಾಸ್ಟ್ರಕ್ಚರ್ ಮಾಡಬೇಕೆಂದು ವಿಶ್ವಬ್ಯಾಂಕಿನವರು ೧೯ ಮಾಡಲ್ ಗ್ರೇನೇಜ್ ಮಾಡಬೇಕೆಂದು ಹೇಳಿದ್ದಾರೆ. ರೋಗರಹಿತವಾದ ಮೊಟ್ಟೆಗಳನ್ನು ಸರ್ಕಾರದವರೇ ತಯಾರು ಮಾಡಿ ಜನಗಳಿಗೆ ಹಂಚಬೇಕು ಎಂದು ಸರ್ಕಾರದ ಉದ್ದೇಶ ಇದೆ.

ಶ್ರೀ ಎಂ. ಸಿ. ಬಸಪ್ಪ.—ಈಗ ಖಾಸಗಿ ಜನಗಳು ಮೊಟ್ಟೆಗಳನ್ನು ತಯಾರು ಮಾಡುತ್ತಿದ್ದಾಗ ಕ್ರಾಪ್ ಫೇಲ್ಯೂರ್ ಹೆಚ್ಚಾಗಿ ಆಗುತ್ತಿರಲಿಲ್ಲ. ಸರ್ಕಾರದ ಗ್ರೈನೇಜ್‌ಗಳು ಬಂದಮೇಲೆ ಕ್ರಾಪ್ ಫೇಲ್ಯೂರ್ ಜಾಸ್ತಿಯಾಗಿದೆ. ಸರ್ಕಾರದ ಗ್ರೈನೇಜ್ ಬಂದಮೇಲೆ ರಿಸರ್ವ ಏರಿಯಾದಲ್ಲಿ ಸರಿಯಾದ ಸೂಪರ್‌ವಿಷನ್ ಇಲ್ಲದೆ ಹೆಚ್ಚಾಗಿ ಕ್ರಾಪ್ ಫೇಲ್ಯೂರ್ ಆಗಿದೆ. ಇದರಿಂದ ರೈತರಿಗೆ ಹೆಚ್ಚು ನಷ್ಟವಾಗುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಬಿ. ಶಿವಯ್ಯ.—ಅದು ಮಾನ್ಯ ಸದಸ್ಯರ ಅಭಿಪ್ರಾಯವಿರಬಹುದು. ಕೆಲವು ಮೊಟ್ಟೆಗಳು ಫೇಲ್ಯೂರ್ ಆಗಿರಬಹುದು. ಎಲ್ಲವೂ ಫೇಲೂರ್ ಆಗುವುದಕ್ಕೆ ಸಾಧವಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಫೇಬ್ರಿಕ್ ರೋಗ ಈ ರೇಷ್ಮೆ ಮೊಟ್ಟೆಗೆ ಬರುತ್ತದೆ ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಕೆ. ಬಿ. ಶಿವಯ್ಯ.—ಗೊತ್ತಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸರ್ಕಾರ ಆಜ್ಞೆ ಪ್ರಕಾರ ಬಿತ್ತನೆ ರೇಷ್ಮೆ ಮೊಟ್ಟೆಯನ್ನು ಕೆಲವು ಪ್ರದೇಶದಲ್ಲಿ ಮಾತ್ರ ಬೆಳೆಯಬೇಕೆಂದು ಆಜ್ಞೆ ಇದೆ. ಇದರಿಂದಾಗಿ ರೈತರ ಸ್ವಾತಂತ್ರ್ಯ ಹರಣವಾಗಿದೆ. ಒತ್ತಾಯಪೂರ್ವಕವಾಗಿ ಈ ಬೆಳೆಯನ್ನು ಬೆಳೆಯಲೇಬೇಕು ಎಂದರೆ ಅದರಿಂದ ಅವನಿಗೆ ನಷ್ಟವಾಗುತ್ತದೆ. ಅದಕ್ಕೋಸ್ಕರ ಯಾವ ಪ್ರದೇಶದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಬೇಕೆಂದು ನಿಯಮ ಇದೆ ಅಲ್ಲಿ ಬೆಳೆದಂತಹ ರೇಷ್ಮೆಗೆ ಕನಿಷ್ಟ ಬೆಲೆಯನ್ನು ಗೊತ್ತುಮಾಡತಕ್ಕಂತಹ ಒಂದು ತೀರ್ಮಾನವನ್ನು ಕೈಗೊಳ್ಳುತ್ತೀರಾ ?

ಶ್ರೀ ಕೆ. ಬಿ. ಶಿವಯ್ಯ. —ಈಗಾಗಲೇ ನಾವು ರೇಷ್ಮೆ ಬಿತ್ತನೆಯನ್ನು ಇಂತಿಂಥ ಏರಿಯಾನಲ್ಲಿ ಮಾಡಬೇಕು ಎಂದು ನಿಗದಿಮಾಡಿದ್ದೇವೆ. ಆದರೆ ರೇಷ್ಮೆ ಮೊಟ್ಟೆ ಮಾಡತಕ್ಕ ಖಾಸಗಿ ಜನ ಏನಿದ್ದಾರೆ ಅವರಿಂದ ಅಡಲ್ಟರೇಷನ್ ಮಾಡಿರತಕ್ಕಂಥ ಗೂಡುಗಳನ್ನು ತೆಗೆದುಕೊಳ್ಳುತ್ತಿದ್ದಾರೆ, ನಾವು ನಿಗದಿಮಾಡಿರತಕ್ಕಂಥಾ ಕಡೆ ತರುತ್ತಾ ಇಲ್ಲ. ಇದ್ದರಿಂದ ಗೂಡನ್ನು ಬೆಳೆದವರಿಗೆ ತೊಂದರೆಯಾಗುತ್ತಾ ಇದೆ. ಮತ್ತೆ ಜನಗಳಿಗೂ ತೊಂದರೆಯಾಗುತ್ತಾ ಇದೆ. ಇದು ಸರ್ಕಾರಕ್ಕೆ ಗೊತ್ತಿದೆ. ಆದುದರಿಂದಲೇ ಮೊಟ್ಟೆ ಮಾಡುವ ಹತೋಟಿಯನ್ನು ತೆಗೆದುಕೊಳ್ಳಬೇಕು ಎನ್ನುವುದು ಸರ್ಕಾರದ ಉದ್ದೇಶ. ಶ್ರೀಮಾನ್ ಬಸಪ್ಪನವರು ಹೇಳಿದ ಹಾಗೆ ಫ್ಯಾಬ್ರಿನ್ ರೋಗ ಮೊಟ್ಟೆಯಿಂದ ಬರುತ್ತದೆ ಎನ್ನುವುದು ಸರ್ಕಾರಕ್ಕೂ ಗೊತ್ತಿದೆ. ಅವರಿಗೂ ಗೊತ್ತಿದೆ. ನನಗೂ ಗೊತ್ತಿದೆ. ಅಲ್ಲೊಂದು ಇಲ್ಲೊಂದು ಫ್ಯಾಬ್ರಿನ್ ರೋಗ ಇದ್ದರೂ ಕೂಡ ಖಾಸಗಿ ಜನ ಹಣದಾಸೆಗಾಗಿ ಅದನ್ನೇ ರೈತರಿಗೆ ಸಪ್ಲೈ ಮಾಡುತ್ತಾರೆ ಆದರೆ ಇಂತಹ ರೋಗ ಎಲ್ಲಿ ಕಂಡುಬಂದರೂ ಕೂಡ ಎಷ್ಟೇವಿಚಾರದರೂ ಅದನ್ನು ನಾಶಮಾಡಿ ರೈತರಿಗೆ ಕೊಡಬೇಕು, ಜನಗಳಿಗೆ ತೊಂದರೆಯಾಗ ಬಾರದು ಎಂಬುದು ಸರ್ಕಾರದ ಉದ್ದೇಶ.

೧೨-೩೦ ಪಿ. ಎಂ.

ಶ್ರೀ ಬಿ ರಾಜುಗೌಡ.—ಈಗಾಗಲೇ ತಾವು ೧೯೭೪ರಲ್ಲಿ ಕೇವಲ ಒಂದೂವರೆ ಕೋಟಿ, ೧೯೭೮ರಲ್ಲಿ ೮ ಕೋಟಿ ಮಾಡಿದ್ದೇವೆ ಎಂದು ಹೇಳಿದಿರಿ. ಇಡೀ ರಾಜ್ಯಕ್ಕೆ ೨೦ ಕೋಟಿ ಮೊಟ್ಟೆ ಬೇಕಾಗುತ್ತದೆ. ಇನ್ನೆಷ್ಟು ವರ್ಷದಲ್ಲಿ ಈ ಅವಶ್ಯಕತೆಯನ್ನು ಪೂರೈಸಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಬಿತ್ತನೆ ಹತೋಟಿಯನ್ನು ಸರ್ಕಾರ ಕೈಗೊಂಡಾಗ ತಾಂತ್ರಿಕ ದೋಷದಿಂದ ವಿಫಲರಾವಾಗ ಸರ್ಕಾರದವರು ಅದಕ್ಕೆ ಜವಾಬ್ದಾರರಾಗುತ್ತಾರೆಯೆ ?

ಶ್ರೀ ಕೆ ಬಿ. ಶಿವಯ್ಯ.—ಹೊಸದವರ್ಷ ನಾಲ್ಕೂವರೆ ಕೋಟಿ ಕೋಟ್ಟಿದ್ದೇವೆ. ಈ ವರ್ಷ ೮ಕೋಟಿ ತಯಾರು ಮಾಡುತ್ತೇವೆ. ಆಲ್ಲಿಗೆ ೬ ಕಡ ೫೦ ರಷ್ಟು ಮಾಡಿದ್ದಾಯಿತು. ಇನ್ನೆರಡು ವರ್ಷಗಳಲ್ಲಿ ಕಟ್ಟಡ, ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಬಂದರೆ ಸಂಪೂರ್ಣವಾಗಿ ಇನ್‌ಫ್ರಾಸ್ಟ್ರಕ್ಚರ್ ಮಾಡುತ್ತೇವೆ, ಜನಗಳಿಗೆ ಎಷ್ಟು ಕೊಡಬೇಕೋ ಅಷ್ಟನ್ನು ಕೊಡಲಿಕ್ಕೆ ಶಕ್ತಿಯನ್ನು ಪಡೆಯುತ್ತೇವೆ.

ಶ್ರೀ ಎಂ. ಸಿ. ಬಸಪ್ಪ.—ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಪೊಟ್ಟೆ ಮಾಡತಕ್ಕವರಿಗೆ ಫ್ಯಾಬ್ರಿನ್ ಇದೆ ಎಂದು ಗೊತ್ತಾದರೆ ಡಿಪೀಸ್ಡ್ ಫೀ ಮಾಡುತ್ತಾರೆ. ಇದನ್ನು ಮಾಸಗಿಯವರೂ ಮಾಡ ಬೇಕಾಗುತ್ತದೆ. ಈ ದೃಷ್ಟಿಯಿಂದ ಹಿಂದೆ ಏಡೆಡ್ ಗ್ರಾನ್ಯೂಲ್ಸ್‌ಗೆ ಬೋನಸ್ ಕೊಡುತ್ತಾ ಇದ್ದರು. ಈಗ ಅದನ್ನು ನಿಲ್ಲಿಸಿದ್ದಾರೆ. ಆದುದರಿಂದ ಹಿಂದಿನಿಂದ ಮಾಡಿಕೊಂಡು ಬಂದಿರತಕ್ಕ ಗ್ರಾನ್ಯೂಲ್ಸ್‌ಗೆ ಇನ್ ಸೆಂಟೀವ್ ಕೊಟ್ಟು ಡಿಪೀಸ್ಡ್ ಫೀ ಲೆಯಿಂಗ್ಸ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಬಿ. ಶಿವಯ್ಯ.—ಅದನ್ನು ಕನ್ಸಿಡರ್ ಮಾಡುತ್ತೇನೆ.

Disease affected to Arecanut Gardens in Koppa—Sringeri and Thirthahalli.

797. SRI KADIDAL DIVAKAR (Thirthalli).—Will the Minister for Sericulture and Horticulture be pleased to state :—

(a) whether it has come to the notice of the Government that the arecanut gardens are affected by yellow leaf disease in Koppa, Sringeri, Thirthahalli and Hosanagar areas ;

(b) the extent of damage caused so far due to the said disease ;

(c) whether it has come to the notice of the Government that the areca crop were severely damaged during 1978 due to "KOLEROGA" in view of heavy rainfall and thereby the ryots were put to great loss ;

(d) if so, the amount of loss sustained by the ryots ;

(e) the nature of help or compensation that would be provided by the Government to such of the ryots who have sustained loss ?

SRI K.B. SHIVAIAH (Minister for Sericulture and Horticulture).—

(a) The arecanut gardens in Koppa and Sringeri Taluks were affected by yellow leaf disease. But, it is learnt that this disease has not spread in Thirthalli and Hosanagar.

(b) The loss estimated is Rs. 32 87 800 due to damage caused to 65,756 arecanut plants in KOPPA Taluk and the loss estimated is Rs. 6,73,500 due to damage caused to 13,480 plants in Sringeri Taluk.

(The details are placed on the Table of the House).**

(c) Yes.

** Copy placed in the Karnataka Legislature Library vide No 36/date 16-5-1979.